ಓ.ಎಸ್. ನಂ. 84/2013

ಡಿ.ಡಬ್ಲ್ಯೂ: 01 (Palaiah)

ದಿನಾಂಕಃ 22.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ – ಶ್ರೀ ASP ವಕೀಲರಿಂದ.

ವಾದಿಗಳು ನಮ್ಮ ವಿರುದ್ಧ ಹೂಡಿರುವ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಎಷ್ಟು ಸರ್ವೆ ನಂಬರುಗಳನ್ನು ಸೇರಿಸಿದ್ದಾರೆ ಎಂದರೆ ನನಗೆ ಓದಲು ಬರೆಯಲು ಗೊತ್ತಿಲ್ಲ. ಒಟ್ಟು 8 ಸರ್ವೆ ನಂಬರುಗಳನ್ನು ಸೇರಿಸಲಾಗಿದೆ ಎಂದರೆ ಹೌದು. ವಾದಿಗಳು ನಮ್ಮ ವಿರುದ್ಧ ಅಸಲು ದಾವೆ ಸಂಖ್ಯೆ 259/96 ರಂತೆ ದಾವೆ ಹೂಡಿದ್ದರು ಎಂದರೆ ಸುಳ್ಳು. ಅದರಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅದರಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಸೇರಿಸಲು ನಾವು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ದಾವೆ ವಜಾಗೊಂಡ ನಂತರ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಹೌದು. ಸದರಿ ಮೇಲ್ಮನವಿ ವಜಾಗೊಂಡ ನಂತರ ನಾನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡೆ ಎಂದರೆ ಪೋತಿ ವಾರಸು ಪ್ರಕಾರ ಮಾಡಿಸಿಕೊಂಡಿರುತ್ತೇವೆ. ವಾದಿಯ ಕುಟುಂಬದ ವಂಶವೃಕ್ಷವನ್ನು ನೀಡಿ ನಾನು ಖಾತಾ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ನಾನು ಓದಿಲ್ಲದ ಕಾರಣ ನನಗೆ ಗೊತ್ತಿಲ್ಲ. ಪೋತಿ ವಾರಸು ಪ್ರಕಾರ ಮಾಡಿಸಿಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಗಂಗಮ್ಮ, ಪಾಲಮ್ಮರವರಿಗೆ ಅರ್ಧ ಹಿಸ್ಸೆ ಇದೆ ಎಂದು ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ಇದೆ ಎಂದರೆ ಹೌದು. ಸರ್ವೇ ಮಾಡಿಸಿಕೊಂಡ ನಂತರ ದಾವಾ ಆಸ್ತಿಗಳನ್ನು ಮೋಜನಿ ಮಾಡಿಸಿಕೊಂಡಿರುತ್ತೇನೆ ಎಂದರೆ ಇಲ್ಲ. ನಾನು ಹಾಜರುಪಡಿಸಿರುವ ಸರ್ವೇ ಸ್ಕೆಚ್ ಹಾಗೂ ಅದರೊಂದಿಗಿರುವ ಹೇಳಿಕೆಯಲ್ಲಿ ನಾನು ಸರ್ವೇ ಮಾಡಲು ಅರ್ಜಿ ನೀಡಿದ್ದೇನೆ ಎಂದು ನಮೂದಾಗಿದೆ ಎಂದರೆ ನನ್ನ ಸಹಿ ಇದೆ ಆದರೆ ನಾನು ಅರ್ಜಿ ನೀಡಿರುವುದಿಲ್ಲ.

ಪಹಣಿ ಪತ್ರದ ಪ್ರಕಾರ ನಾನು ಎಂದಿಗೂ ಭೌತಿಕ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ 2 ಎಕರೆ 4 ಸೆಂಟ್ಸ ಎಂದು ತೋರಿಸಿದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸರ್ವೆ ನಂಬರ್ 163/ಬಿ ರಲ್ಲಿ ನನ್ನ ಹೆಸರಿಗೆ 4.09 ಎಕರೆ ಪೈಕಿ 2 ಎಕರೆ 4 ಸೆಂಟ್ಸ ನನ್ನ ಹೆಸರಿಗೆ ಮ್ಯುಟೇಶನ್ ಆಗಿದೆ. ದಾವಾ ಆಸ್ತಿ ಐಟಂ ನಂಬರ್ 1 ರ ಉತ್ತರಕ್ಕೆ ಸರ್ವೆ ನಂಬರ್ 164 ಬಿ ಎಂದರೆ ಸರಕಾರಿ ರಸ್ತೆ ಬರುತ್ತದೆ. ಸದರಿ ಸರಕಾರಿ ರಸ್ತೆ ಸರ್ವೆ ನಂಬರ್ 164 ಬಿ ರಲ್ಲಿ ಇದೆ ಎಂದರೆ ಸುಳ್ಳು. ದಾವಾ ಆಸ್ತಿ ಐಟಂ ನಂಬರ್ 1 ರ ದಕ್ಷಿಣಕ್ಕೆ ಹಾಗೂ ಪಶ್ಚಿಮ ದಿಕ್ಕಿಗೆ ಗೌಡರ ದೊಡ್ಡ ಓಬಯ್ಯರವರ ಜಮೀನು ಇದೆ ಎಂದರೆ ಸರಿ.

ದಾವಾ ಆಸ್ತಿಯ ಐಟಂ ನಂಬರ್ 2 ರ ಸರ್ವೆ ನಂಬರ್ 164 ಬಿ ಯನ್ನು ನಾನು ಸರ್ವೇ ಮಾಡಿಸಿದ್ದೇನೆ ಎಂದರೆ ಸುಳ್ಳು.

ಓ.ಎಸ್. ನಂ. 84/2013

ಡಿ.ಡಬ್ಲ್ಯು: 01 (Palaiah)

ದಾವಾ ಆಸ್ತಿಯ ಐಟಂ ನಂಬರ್ 2 ರ ಪೂರ್ವಕ್ಕೆ ಕರೆ ಬೋರಯ್ಯ ಜಮೀನು ಇದೆ ಎಂದರೆ ಹೌದು. ಪಶ್ಚಿಮಕ್ಕೆ ಪಾಲಮ್ಮ ಹಾಗೂ ಮುದ್ದಲ ಬೋರಯ್ಯನ ಜಮೀನು ಇದೆ ಎಂದರೆ ಹೌದು. ಉತ್ತರಕ್ಕೆ ರಸ್ತೆ ಇದೆ ಎಂದರೆ ಹೌದು. ದಕ್ಷಿಣಕ್ಕೆ ಸರ್ವೆ ನಂಬರ್ 163 ಬಿ ಇದೆ ಎಂದರೆ ಹೌದು.

ದಾವಾ ಆಸ್ತಿಯ ಐಟಂ ನಂಬರ್ 3 ರ ಸರ್ವೆ ನಂಬರ್ 181 ಡಿ ರ ಪೂರ್ವಕ್ಕೆ ನರಸಿಂಹಗಿರಿ ರಸ್ತೆ ಹಾಗೂ ಕರೆ ಬೋರಯ್ಯರವರ ಜಮೀನು ಇದೆ ಎಂದರೆ ಹೌದು. ಪಶ್ಚಿಮಕ್ಕೆ ಜನತಾ ಮನೆ ಇದೆ ಎಂದರೆ ಹೌದು. ಉತ್ತರಕ್ಕೆ ಬಂಡಿ ರಸ್ತೆ ಹಾಗೂ ಗೌಡರ ಬೋರಯ್ಯನ ಜಮೀನು ಇದೆ ಎಂದರೆ ಹೌದು. ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಹೌದು.

ದಾವಾ ಆಸ್ತಿಯ ಐಟಂ ನಂಬರ್ 4 ರ ಸರ್ವೆ ನಂಬರ್ 210 ಎ ರ ಪೂರ್ವಕ್ಕೆ ಕರೆ ಬೋರಯ್ಯರವರ ಜಮೀನು ಇದೆ ಎಂದರೆ ಹೌದು. ಪಶ್ಚಿಮಕ್ಕೆ ಸಣ್ಣ ಗುಡ್ಡ ಇದೆ ಎಂದರೆ ಹೌದು. ಉತ್ತರಕ್ಕೆ ಅದೇ ಸರ್ವೆ ನಂಬರಿನಲ್ಲಿ ಕಾಡಲ ಬೋರಯ್ಯ, ಅಂಗಡಿ ಬೋರಯ್ಯ, ಮೋಟ್ಲ ಪಾಪಯ್ಯ ಮತ್ತು ಪಾಲಮ್ಮರವರ ಜಮೀನು ಇದೆ ಎಂದರೆ ಹೌದು. ದಕ್ಷಿಣಕ್ಕೆ ಗೋಕಟ್ಟೆ ಇದೆ ಎಂದರೆ ಹೌದು.

ದಾವಾ ಆಸ್ತಿಯ ಐಟಂ ನಂಬರ್ 5 ರ ಸರ್ವೆ ನಂಬರ್ 212 ಡಿ ರ ಪೂರ್ವಕ್ಕೆ ಗೌಡರ ಶೇಡ್ ಬೋರಯ್ಯರವರ ಜಮೀನು ಇದೆ ಎಂದರೆ ಹೌದು. ಪಶ್ಚಿಮಕ್ಕೆ ಮುದ್ದಲು ಬೋರಯ್ಯ ಮತ್ತು ಶೇಡ್ ಬೋರಯ್ಯರವರ ಜಮೀನು ಇದೆ ಎಂದರೆ ಹೌದು. ಉತ್ತರಕ್ಕೆ ಕೆಂಗ ಓಬಯ್ಯ ರವರ ಜಮೀನು, ದಕ್ಷಿಣಕ್ಕೆ ಅದೇ ಸರ್ವೆ ನಂಬರಿನಲ್ಲಿ ಕಾಡಲ ಓಬಯ್ಯ, ಅಂಗಡಿ ಬೋರಯ್ಯ, ಮೋಟ್ಲ ಪಾಪಯ್ಯ ಮತ್ತು ಪಾಲಮ್ಮರವರ ಜಮೀನು ಇದೆ ಎಂದರೆ ಹೌದು.

ದಾವಾ ಆಸ್ತಿಯ ಐಟಂ ನಂಬರ್ 6-8 ರ ಚೆಕ್‌ಬಂದಿ ವಾದಪತ್ರದಲ್ಲಿ ತೋರಿಸಿದಂತೆ ಸರಿ ಇದೆ ಎಂದರೆ ಹೌದು. ವಾದಿಯ ತಂದೆ ಹಾಗೂ ನನ್ನ ತಾತನಾದ ದಾಸರ ಓಬಯ್ಯನ ಭಾಗಕ್ಕೆ ದಾವಾ ಸ್ವತ್ತುಗಳು ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಗೂ ನಮಗೂ ಸಂಬಂಧ ಇಲ್ಲ. ಇದಲ್ಲದೆ ದಾಸರ ಓಬಯ್ಯನ ಭಾಗಕ್ಕೆ ಒಂದು ಮನೆ ಸಮೇತ ಬಂದಿತ್ತು ಎಂದರೆ ಹೌದು. ಸದರಿ ಮನೆಯಲ್ಲಿ ಈಗ ವಾದಿಗಳು ವಾಸ ಮಾಡುತ್ತಿದ್ದಾರೆ ಎಂದರೆ ಹೌದು. ಅದರ ಪೂರ್ವ ದಿಕ್ಕಿಗೆ ನಮ್ಮ ಗ್ರಾಮದವರಾದ ದಾಸರ ಓಬಯ್ಯನ ಮನೆ ಇದೆ ಎಂದರೆ ಹೌದು. ಪಶ್ಚಿಮಕ್ಕೆ ಬಯಲು ಜಾಗ ಇದ್ದು, ಉತ್ತರಕ್ಕೆ ದಾರಿ, ದಕ್ಷಿಣಕ್ಕೆ ನಮ್ಮ ತಾತನಾದ ದಾಸರ ಓಬಯ್ಯನ ಜಮೀನು ಇತ್ತು ಎಂದರೆ ಹೌದು.

ಓ.ಎಸ್. ನಂ. 84/2013

ಡಿ.ಡಬ್ಲ್ಯು: 01 (Palaiah)

ದಾವಾ ಆಸ್ತಿಯ ಐಟಂ ನಂಬರ್ 1 ವಿಸ್ತೀರ್ಣ 4.09 ರ ಪೈಕಿ 2.04 ½ ಎಕರೆ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ವಿಸ್ತೀರ್ಣ ನಮ್ಮದೇ ಆಗಿರುತ್ತದೆ. ದಾವಾ ಆಸ್ತಿಯ ಐಟಂ ನಂಬರ್ 2 ವಿಸ್ತೀರ್ಣ 4.63 ರ ಪೈಕಿ 2.31 ½ ಎಕರೆ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ವಿಸ್ತೀರ್ಣ ನಮ್ಮದೇ ಆಗಿರುತ್ತದೆ. ದಾವಾ ಆಸ್ತಿಯ ಐಟಂ ನಂಬರ್ 3 ವಿಸ್ತೀರ್ಣ 2.25 ರ ಪೈಕಿ 1.12 ½ ಎಕರೆ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ವಿಸ್ತೀರ್ಣ ನಮ್ಮದೇ ಆಗಿರುತ್ತದೆ. ದಾವಾ ಆಸ್ತಿಯ ಐಟಂ ನಂಬರ್ 4 ವಿಸ್ತೀರ್ಣ 1.15 ರ ಪೈಕಿ 0.57 ½ ಎಕರೆ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ವಿಸ್ತೀರ್ಣ ನಮ್ಮದೇ ಆಗಿರುತ್ತದೆ. ದಾವಾ ಆಸ್ತಿಯ ಐಟಂ ನಂಬರ್ 5 ವಿಸ್ತೀರ್ಣ 0.60 ರ ಪೈಕಿ 0.30 ಎಕರೆ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ವಿಸ್ತೀರ್ಣ ನಮ್ಮದೇ ಆಗಿರುತ್ತದೆ. ದಾವಾ ಆಸ್ತಿಯ ಐಟಂ ನಂಬರ್ 6 ವಿಸ್ತೀರ್ಣ 0.53 ರ ಪೈಕಿ 0.26 ½ ಎಕರೆ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ವಿಸ್ತೀರ್ಣ ನಮ್ಮದೇ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.